ತುಂಬಿಕೊಂಡು ಅವುಗಳ ಪರಿಮಳ ಆಘ್ರಾಣಿಸುತ್ತ ನಿದ್ದೆ ಹೋಗಿಬಿಡುತ್ತಿದ್ದೆ.

★★★

ನಾನು ಆರು ವರ್ಷದ ಚಿಕ್ಕವಳಿದ್ದಾಗಲೇ ಅಜ್ಜಿ ನಮ್ಮನ್ನಗಲಿ ಹೋಗಿಬಿಟ್ಟಿದ್ದರು. ಅವರ ನಂತರ ನನ್ನ ಅಮ್ಮ ಆ ಕತೆಯನ್ನು ಹೇಳುತ್ತಿದ್ದಳು. ಆದರೆ ದಿನಪೂರ್ತಿ ಆಯಾಸಗೊಂಡ ಆ ಶರೀರಕ್ಕೆ ಕತೆ ಹೇಳುವ ವ್ಯವಧಾನವಾದರೂ ಎಲ್ಲಿರುತ್ತಿತ್ತು? ಆದರೂ ನನ್ನ ಹಟದಿಂದಾಗಿ ಅಮ್ಮ ಕತೆ ಹೇಳಲು ಶುರುಮಾಡುತ್ತಿದ್ದಳು. ಆ ಕತೆಯನ್ನು ಅರ್ಧಂಬರ್ಧ ಹಂಚಿ ತುಂಡುಮಾಡಿ ಹೇಳುತ್ತ ಕೊನೆ ಕೊನೆಗೆ ಒಂದೊಂದೇ ಶಬ್ದವನ್ನು ಉಸುರುತ್ತಿದ್ದಳು. ಆಗ ಹೆದರಿಕೆಯಿಂದಾಗಿ ನಾನು ಅಮ್ಮನಿಗೆ ಏನನ್ನೂ ಹೇಳುತ್ತಿರಲಿಲ್ಲ. ಮುಂದಿನ ಕತೆಯನ್ನು ಮನಸ್ಸಿನೊಳಗೇ ನಾನು ಪೂರ್ಣಗೊಳಿಸಿಕೊಳ್ಳುತ್ತಿದ್ದೆ.

ಒಂದು ದಿನ ಕತೆಯ ನಡುವೆ ಅಮ್ಮ ಆ ರಾಜಕುಮಾರನ ಸುಂದರವಾದ ಚಿನ್ನದ ಬಣ್ಣದ ಕೂದಲಿನ ಬಗ್ಗೆ ಹೇಳುತ್ತಿದ್ದಳು. ಆಗ ನಾನು ನಿದ್ದೆಯ ಮಂಪರಿನಲ್ಲಿದ್ದರೂ ನನ್ನ ಆಸೆಯನ್ನು ವ್ಯಕ್ತಪಡಿಸುತ್ತ ಹೇಳಿದ್ದೆ... "ಅಕಸ್ಮಾತ್ ಆ ರಾಜಕುಮಾರ ನಮ್ಮ ಪಟ್ಟಣಕ್ಕೆ ಬಂದರೆ ನಾನು ಆತನ ಚಿನ್ನದ ಕೂದಲನ್ನು ಮುಟ್ಟಿ ನೋಡುವೆ..." ಅಮ್ಮನ ನಿದ್ದೆ ಹಾರಿಹೋಯಿತು. ಆಕೆ ಕೂಡಲೆ ಎದ್ದು ಕುಳಿತಳು. ನಿದ್ದೆಯ ಮಂಪರು ಮತ್ತು ಕೋಪದಿಂದ ನನ್ನನ್ನು ದಿಟ್ಟಿಸಿ ನೋಡುತ್ತ ಹೇಳಿದಳು... "ಹುಚ್ಚು ಹಿಡಿದಿದೆಯಾ ನಿನಗೆ? ಪರಪುರುಷನನ್ನು ಮುಟ್ಟುವುದು ಅಂದ್ರೆ ಏನು? ದೇವರೇ... ದೇವರೇ!... ತಪ್ಪಾಯ್ತು ಅಂತ ಕಿವಿ ಹಿಡಿದುಕೊ..." 'ಅವನು ರಾಜಕುಮಾರ ಅಮ್ಮ...' ನಾನು ಹೇಳಿದೆ. "ಅಯ್ಯೋ ಮೂರ್ಖ ಹುಡುಗಿ, ಆತನೂ ಗಂಡಸು ತಾನೆ!" ಕತೆ ಅರ್ಧದಲ್ಲಿಯೇ ನಿಂತಿತು. ಅಮ್ಮ 'ತಪ್ಪೊಪ್ಪಿಗೆ'ಯನ್ನು ಪಠಿಸಿ ನನ್ನಿಂದಲೂ ಓದಿಸಿದಳು. ನಾನು ಆ 'ಅಲ್ಲಾ'ನಿಗಿಂತಲೂ ಜಾಸ್ತಿ ಅಮ್ಮನಿಗೆ ಹೆದರಿ ಕ್ಷಮೆ ಕೇಳಿ ನಿದ್ದೆಹೋದೆ.

ಒಂದು ದಿನ ವಿಚಿತ್ರವೇ ನಡೆದು ಹೋಯಿತು. ಸುಡುಬಿಸಿಲಿನ ಆ ಮಧ್ಯಾಹ್ನದ ಹೊತ್ತಿನಲ್ಲಿ ಅಮ್ಮ ಮಲಗಿ ಜೋರಾಗಿ ಗೊರಕೆ ಹೊಡೆಯುತ್ತಿದ್ದಳು. ಸುತ್ತಲೂ ನೋಡಿದ ನಾನು ಮೆಲ್ಲನೆ ಹೆಜ್ಜೆ ಇಡುತ್ತ ಬಾಗಿಲು ತೆರೆದು ಹೊರಗೆ ಓಡಿದೆ. ಬಿಸಿಲಿನ ಝಳವನ್ನು ಲೆಕ್ಕಿಸದೆ ತೆರೆದ ಪಡಸಾಲೆಯಲ್ಲಿ ಕುಳಿತುಕೊಂಡು ಬೇಗ ಬೇಗನೆ ಶಾಲೆಯ ಚೀಲದಿಂದ ಡ್ರಾಯಿಂಗ್ ಕಾಪಿಯನ್ನು ತೆರೆದು ಅದರಲ್ಲಿ ನನ್ನ ರಾಜಕುಮಾರನ ಚಿತ್ರದ ಸ್ಕೆಚ್ ಮಾಡಿಬಿಟ್ಟೆ. ಆತನ ತಲೆಕೂದಲಿಗೆ ಬಂಗಾರದ ಬಣ್ಣವಿರುವ ಪೆನ್ಸಿಲ್‌ನಿಂದ ಬಣ್ಣ ತುಂಬಲಾರಂಭಿಸಿದ್ದೆನಷ್ಟೇ... ನನ್ನ ಹಿಂದಿನಿಂದ ಬಂದು ನಿಂತಿದ್ದ ಅಮ್ಮ ನಿರ್ದಯವಾಗಿ ಆ ಸ್ಕೆಚ್‌ನ್ನು ಕಿತ್ತುಕೊಳ್ಳಲು ಕೈ ಹಾಕಿದಳು. ನಾನು ಗಟ್ಟಿಯಾಗಿ ಹಿಡಿದುಕೊಂಡು ಆ ನನ್ನ ಕನಸಿನ ರಾಜಕುಮಾರನ ಸ್ಕೆಚ್‌ನ್ನು ಎದೆಗವುಚಿಕೊಂಡೆ.

ಆದರೆ ಅಮ್ಮ ನನ್ನ ಬೆನ್ನಿಗೆ ಜೋರಾಗಿ ಗುದ್ದಿ ಕ್ಷಣಾರ್ಧದಲ್ಲಿ ನನ್ನ ಎದೆಯ ಮೇಲಿದ್ದ ಆ ಸ್ಕೆಚ್‌ನ್ನು ಕಿತ್ತುಕೊಳ್ಳುತ್ತ... "ನೀನೆಂತಹ ತಿಳಿಗೇಡಿ ಹುಡುಗಿ, ನಮ್ಮ ಮನೆತನದ ಮರ್ಯಾದೆಯನ್ನೆಲ್ಲಾ ಮಣ್ಣುಪಾಲು ಮಾಡುತ್ತಿದ್ದೀಯಲ್ಲ! ಗುರುತು ಪರಿಚಯವಿಲ್ಲದ ಆ ಗಂಡಸಿನ ಚಿತ್ರವನ್ನು ಬರೆಯುವಂತಿಲ್ಲ! ಅಲ್ಲಾನ ಸಮಕ್ಷಮ ಏನು ಹೇಳುವೆ?" ಎನ್ನುತ್ತಾ ನನ್ನ ರಾಜಕುಮಾರನ ಅಪೂರ್ಣ ಚಿತ್ರವನ್ನು ಹರಿದು ಚೂರುಚೂರು ಮಾಡಿ ಉರಿಯುತ್ತಿದ್ದ ಒಲೆಗೆ ಹಾಕಿಬಿಟ್ಟಳು. ನಂತರ ಕಾಲನ್ನು ಬಡಿಯುತ್ತ ಬಿಕ್ಕಳಿಸಿ ಅಳತೊಡಗಿದಳು. ಆಕೆಗೆ ಕರುಣೆಯೇ ಬರಲಿಲ್ಲ. ಹಾಸಿಗೆ ಮೇಲೆ ಉರುಳಿಕೊಂಡಳು. ಹಾಳಾಗಿ ಹೋಗುತ್ತಿದ್ದ ತನ್ನ ಕುಟುಂಬದ ಮರ್ಯಾದೆಯನ್ನು ಉಳಿಸಿದೆನೆಂಬ ತೃಪ್ತಿ ಆಕೆಯ ಮುಖದಲ್ಲಿ ವ್ಯಕ್ತವಾಗುತ್ತಿತ್ತು.

★★★

ಅವರು ಮಗ್ಗುಲು ಬದಲಾಯಿಸಿದಾಗ ನನಗೆ ನೆನಪಾಯಿತು. ನಾನು ಮೊದಲ ರಾತ್ರಿಯ